# ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

## ಡಯಟ್, ಚಿಕ್ಕಮಗಳೂರು

# ಪಾಠ ಆಧಾರಿತ ಮೌಲ್ಯಾಂಕನ ಸಾಮಾಗ್ರಿ

## ವಿಷಯ- ಕನ್ನಡ

## ಸವಿಗನ್ನಡ-ಒಂದನೇ ತರಗತಿ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ

ಬನಶಂಕರಿ 3ನೇ ಹಂತ, ಬೆಂಗಳೂರು-560085

| |
|---|
| ಪರಿಕಲ್ಪನೆ ಮತ್ತು ಮಾರ್ಗದರ್ಶನ |
| ಶ್ರೀಮತಿ ರಶ್ಮಿ ಮಹೇಶ್. ವಿ  ಭಾ.ಆ.ಸೇ. |
| ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು |
| ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ |

| | |
|---|---|
| ಡಾ. ತ್ರಿಲೋಕ್ ಚಂದ್ರ ಕೆ.ವಿ., ಬಾ.ಆ.ಸೇ.<br>ಆಯುಕ್ತರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬೆಂಗಳೂರು | ಶ್ರೀ ಗೋಪಾಲ ಕೃಷ್ಣ ಹೆಚ್.ಎನ್.<br>ನಿರ್ದೇಶಕರು. ಡಿಎಸ್.ಇ.ಆರ್.ಟಿ, ಬೆಂಗಳೂರು |

ಡಯಟ್ ಸಹಕಾರ

| | |
|---|---|
| ಪ್ರಾಂಶುಪಾಲರು<br>ಶ್ರೀ ಆಂತೋಣಿ ರಾಜ್ ಚಿಕ್ಕಮಗಳೂರು | ಮೆಂಟರ್<br>ಶ್ರೀ ಉಮಾನಾಯ್ಕ. ಎನ್.<br>ಉಪನ್ಯಾಸಕರು |

ಸಂಯೋಜನೆ

| |
|---|
| ಶ್ರೀಮತಿ  ರಾಧಾ.ಪಿ ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು. |

ಪಾಠ ಆಧಾರಿತ ಮೌಲ್ಯಾಂಕನ ಸಾಮಾಗ್ರಿ ರಚನಾ ಸಂಪನ್ಮೂಲ ತಂಡ

| | |
|---|---|
| 1.sಸುಧಾ ಎಸ್ ಜಿ ಎಲ್ ಪಿ ಎಸ್ ಗಿಡ್ಡೇನಹಳ್ಳಿ<br>2.ಕೊಟ್ರೇಶ್. ಜಿ.ಹೆಚ್.ಪಿ.ಎಸ್. ಕುಂಚೇಬೈಲು | 3. ಮೋಹನ್ ಕುಮಾರ್ ಜಿ.ಎಲ್.ಪಿ.ಎಸ್. ಮಲ್ಲಪ್ಪನಹಳ್ಳಿ |

ಮಾರ್ಗದರ್ಶಕರು ಹಾಗೂ  ಪರಿಶೀಲಕರು

| | |
|---|---|
| 1. ಶ್ರೀಮತಿ ಮೋಹನಕುಮಾರಿ ಎನ್. ಹಿರಿಯ ಉಪನ್ಯಾಸಕರು | 2. ಕವಿತ  ಬಿ.ಆರ್.ಪಿ., ನೆಲಮಂಗಲ,<br>ಬೆಂಗಳೂರು ಗ್ರಾಮಾಂತರ |

# ಸವಿಗನ್ನಡ

## ತರಗತಿ-01

## ಪರಿವಿಡಿ

## ಪ್ರಶ್ನಾಕೋಠಿ

## ಮಾದರಿ ಕೀಲಿ ಉತ್ತರಗಳು

| ಕ್ರ.ಸಂ | ಭಾಗದ ಸಂಖ್ಯೆ | ಪಾಠದ ಸಂಖ್ಯೆ | ಪಾಠ/ಪದ್ಯದ ಹೆಸರು | ಪುಟ ಸಂಖ್ಯೆ |
|---|---|---|---|---|
| 01 | | 1 | ವಂದನೆ(ಪದ್ಯ) | 27 |
| 02 | | 2 | ಸಹಕಾರ(ಪಾಠ) | 28 |
| 03 | | 3 | ಊಟದ ಆಟ(ಪದ್ಯ) | 29 |
| 04 | | 4 | ಪಾಠ/ಪದ್ಯ-04 ಹೂದೋಟ | 30 |
| 05 | | 5 | ರೇಖಾಭ್ಯಾಸ ಪಾಠಗಳು | 31 |
| 06 | ಭಾಗ-01 | 6 | ಬೇಸಿಗೆ ರಜೆಯಲಿ (ಪದ್ಯ) | 32 |
| 07 | | 7 | ಕೋತಿ ಮತ್ತು ಅಳಿಲು | 33 |
| 08 | | 8 | ಪದ ಓದು- ಅಕ್ಷರ ಕಲಿ | 34 |
| 09 | | 9 | ಚಂದಿರನೇತಕೆ ಓಡುವನಮ್ಮ( ಪದ್ಯ) | 35 |
| 10 | | 10 | ಗುಣಿತಾಕ್ಷರಗಳು | 36 |
| 11 | | 11 | ವಿವೇಕಾನಂದರ ಜನುಮ ದಿನ | 37 |
| 12 | | 12 | ಒತ್ತಕ್ಷರಗಳು | 38 |
| 13 | ಭಾಗ- | 13 | ಅಬ್ಬಾಸ್ ಹಣ್ಣಿನ ಅಂಗಡಿ | 39 |
| 14 | 02 | 14 | ಮೂಲದ ಮರಿ | 40 |
| 15 | | 15 | ಶಂಕ್ರಪ್ಪನ ಮನೆ | 41 |
| 16 | | 16 | ಕೈತೊಳೆಯಬೇಕು | 42 |
| 17 | | 17 | ಸಿಗಡಿ ಯಾಕೆ ಒಣಗಲಿಲ್ಲ? | 43 |

**ಕಲಿಕಾ ಫಲಗಳು/ಕಲಿಕಾ ಸಾಮರ್ಥ್ಯಗಳು**

| ಕ್ರ.ಸಂ | ಘಟಕ | ಪಾಠ/ಪದ್ಯಗಳ ಹೆಸರು | ಕಲಿಕಾ ಫಲಗಳು/ಕಲಿಕಾ ಸಾಮರ್ಥ್ಯಗಳು |
|---|---|---|---|
| 1 | | ವಂದನೆ (ಪದ್ಯ) | 1. ಸೇವೆಯ ಮಹತ್ವವನ್ನು ಅರ್ಥೈಸಿಕೊಳ್ಳುವರು.<br>2. ಕೃತಜ್ಞತ ಭಾವನೆಯನ್ನು ಬೆಳೆಸಿಕೊಳ್ಳುವರು.<br>3.ಆಲಿಸಿದ ವಿಷಯ ವಸ್ತು (ಕಥೆ ಕವಿತೆ ಪ್ರಾಸ) ಗಳನ್ನು ಕುರಿತು ಮಾತನಾಡುತ್ತಾರೆ ಹಾಗೂ ತಮ್ಮ ಅಭಿಪ್ರಾಯ ನೀಡುತ್ತಾರೆ, ಪ್ರಶ್ನಿಸುತ್ತಾರೆ, ಪ್ರಶ್ನೆ ಕೇಳುತ್ತಾರೆ, ತನ್ನ ಅನಿಸಿಕೆ ಅಭಿಪ್ರಾಯ ಹೇಳುತ್ತಾರೆ, ಸಂವಾದದಲ್ಲಿ ಪಾಲ್ಗೊಳ್ಳುತ್ತಾರೆ |
| 2 | | ಸಹಕಾರ (ಪಾಠ) | 1. ಆಲಿಸುವುದು ಮತ್ತು ಮಾತನಾಡುವುದು<br>2.ಜೀವನದಲ್ಲಿ ದೂರದೃಷ್ಟಿಯ ಮಹತ್ವವನ್ನು ತಿಳಿಯುವರು 3.ವರ್ಣಮಾಲೆ ಅಕ್ಷರಗಳ ಆಕಾರ ಮತ್ತು ಧ್ವನಿಯನ್ನು ಗುರುತಿಸಿ ಓದುತ್ತಾರೆ ಮತ್ತು ಬರೆಯುತ್ತಾರೆ. |
| 3 | | ಊಟದ ಆಟ (ಪದ್ಯ) | 1. ಕವಿತೆಗಳನ್ನು ಆಲಿಸಿ ಆನಂದಿಸುವರು.2<br>2. ಶಿಕ್ಷಕರು ಕೈ ಬೆರಳುಗಳನ್ನು ತೋರಿಸುತ್ತಾ ಎಣಿಸಿ ಹೇಳಲು ತಿಳಿಸುವುದು (ಜ್ಞಾನ)<br>3.ಭಾಷೆಯ ಪ್ರಾಸ, ಲಯ ಹಿಡಿದು ಆಟ ಆಡುವುದನ್ನುಆನಂದಿಸುವುದನ್ನು ಮಾಡುತ್ತಾರೆ. ಉದಾಹರಣೆಗೆ ಅಣ್ಣ ರನ್ನ ಚಿನ್ನ ಮುನ್ನ ಇತ್ಯಾದಿ |
| 4 | | ಪಾಠ/ಪದ್ಯ-04 ಹೂದೋಟ | 1. ಸಂಭಾಷಣೆಯಲ್ಲಿ ಪಾಲ್ಗೋಳ್ಳುವುದು<br>2. ಕ್ಷೇತ್ರ : ಮಾತನಾಡುವುದು ಸಾಮರ್ಥ್ಯ<br>3.ವಿವಿಧ ಉದ್ದೇಶಗಳಿಗನುಸಾರವಾಗಿ ತಮ್ಮ ಭಾಷೆ /ಶಾಲೆಯ ಭಾಷೆ ಪ್ರಯೋಗ ಮಾಡುತ್ತಾರೆ. |
| 5 | | ರೇಖಾಭ್ಯಾಸ ಪಾಠಗಳು | 1. ಕ್ಷೇತ್ರ: ಬರೆಯುವ ಕೌಶಲ್ಯ.<br>2. ಮುದ್ರಿತ ಅಕ್ಷರ ಸಾಮಗ್ರಿಗಳಲ್ಲಿ ಚಿತ್ರಗಳನ್ನು ಗುರುತಿಸುತ್ತಾರೆ, ಓದುತ್ತಾರೆ. ಮುದ್ರಿತಾ ಬರವಣಿಗೆ ಮತ್ತು ಮುದ್ರಿತ ಚಿತ್ರಗಳನ್ನು ಗುರುತಿಸುತ್ತಾರೆ. |
| 6 | | ಬೇಸಿಗೆ ರಜೆಯಲಿ (ಪದ್ಯ) | 1. ಕವನಗಳನ್ನು ಆಲಿಸಿ ಆನಂದಿಸುವರು.<br>2. ಕ್ಷೇತ್ರ : ಆಲಿಸುವುದು ಮತ್ತು ಮಾತನಾಡುವುದು. 3.ಸಂದರ್ಭಗಳ ಸಹಾಯದಿಂದ ಆಸು ಪಾಸಿನಲ್ಲಿ ಸಿಗುವ ಮುದ್ರಿತ ಸಾಮಗ್ರಿಯ ಅರ್ಥ ಮತ್ತು ಉದ್ದೇಶಗಳನ್ನು ಊಹೆ ಮಾಡುತ್ತಾರೆ. |

| | | | |
|---|---|---|---|
| 7 | ಭಾಗ-01 | ಕೋತಿ ಮತ್ತು ಅಳಿಲು | 1. ಕ್ಷೇತ್ರ : ಮಾತನಾಡುವುದು<br>2. ಸಂಭಾಷಣೆಯಲ್ಲಿ ತೊಡಗುವರು<br>( ಕೋತಿ ಮತ್ತು ಅಳಿಲು) : ಕಥೆಯನ್ನು ಮಕ್ಕಳು ತಮ್ಮದೇ ಧಾಟಿಯಲ್ಲಿ ಹೇಳುವರು.)<br><br>3.ಭಾಷೆಯ ಪ್ರಾಸ, ಲಯ ಹಿಡಿದು ಆಟ ಆಡುವುದನ್ನು ಆನಂದಿಸುವುದನ್ನು ಮಾಡುತ್ತಾರೆ |
| 8 | | ಪದ ಓದು- ಅಕ್ಷರ ಕಲಿ | 1. ಕ್ಷೇತ್ರ: ಓದುವುದು ಮತ್ತು ಬರೆಯುವುದು<br>2. ಸರಳ ಪದಗಳು ಹಾಗೂ ಅಕ್ಷರಗಳನ್ನು ಓದಲು ಮತ್ತು ಬರೆಯಲು ತಿಳಿಯುವರು.<br>3.ಮುದ್ರಿತ ಅಕ್ಷರ ಸಾಮಗ್ರಿಗಳಲ್ಲಿ ಚಿತ್ರಗಳನ್ನು ಗುರುತಿಸುತ್ತಾರೆ, ಓದುತ್ತಾರೆ. ಮುದ್ರಿತಾ ಬರವಣಿಗೆ ಮತ್ತು ಮುದ್ರಿತ ಚಿತ್ರಗಳನ್ನು ಗುರುತಿಸುತ್ತಾರೆ. |
| 9 | | ಚಂದಿರನೇತಕೆ ಓಡುವನಮ್ಮ ( ಪದ್ಯ) | 1. ಕ್ಷೇತ್ರ: ಆಲಿಸುವ ಕೌಶಲ<br><br>2. ತಾಯಿಯ ಪ್ರೀತಿ ಹಾಗೂ  ಆರೈಕೆಯ ವಿಧಾನವನ್ನು ತಿಳಿದುಕೊಳ್ಳವರು.<br><br>3 ಆಲಿಸಿದ ವಿಷಯ ವಸ್ತು (ಕಥೆ ಕವಿತೆ ಪ್ರಾಸ) ಗಳನ್ನು ಕುರಿತು ಮಾತನಾಡುತ್ತಾರೆ ಹಾಗೂ ತಮ್ಮ ಅಭಿಪ್ರಾಯ ನೀಡುತ್ತಾರೆ, ಪ್ರಶ್ನಿಸುತ್ತಾರೆ, ಪ್ರಶ್ನೆ ಕೇಳುತ್ತಾರೆ, ತನ್ನ ಅನಿಸಿಕೆ ಅಭಿಪ್ರಾಯ ಹೇಳುತ್ತಾರೆ, |
| 10 | | ಗುಣಿತಾಕ್ಷರಗಳು | 1. ಗುಣಿತಾಕ್ಷರಗಳು ಹಾಗೂ ಅವುಗಳ ಮಹತ್ವವನ್ನು ತಿಳಿಯುವರು.<br><br>2. ಮುದ್ರಿತ ಅಕ್ಷರ ಸಾಮಗ್ರಿಗಳಲ್ಲಿ ಚಿತ್ರಗಳನ್ನು ಗುರುತಿಸುತ್ತಾರೆ, ಓದುತ್ತಾರೆ. ಮುದ್ರಿತಾ ಬರವಣಿಗೆ ಮತ್ತು ಮುದ್ರಿತ ಚಿತ್ರಗಳನ್ನು ಗುರುತಿಸುತ್ತಾರೆ. |
| 11 | ಭಾಗ-02 | ವಿವೇಕಾನಂದರ ಜನುಮ ದಿನ | 1. ಸ್ವಾಮಿ ವಿವೇಕಾನಂದರ ಜೀವನ ಸುಧಾರಣಾ ಕೆಲಸಗಳನ್ನು ತಿಳಿದುಕೊಳ್ಳುವರು.<br>2. ಕ್ಷೇತ್ರ: ಆಲಿಸುವ, ಓದುವ ಕೌಶಲ<br><br>3.ಅಕ್ಷರ, ಪದ, ಸರಳ ವಾಕ್ಯಗಳನ್ನು ಸರಿಯಾದ ಗಾತ್ರ ಅಂತರದೊಂದಿಗೆ ಬರೆಯುತ್ತಾರೆ ಮತ್ತು ಓದುತ್ತಾರೆ |
| 12 | | ಒತ್ತಕ್ಷರಗಳು | 1. ಪದ ಹಾಗೂ ಅಕ್ಷರದಲ್ಲಿ ಒತ್ತಕ್ಷರದ ಮಹತ್ವವನ್ನು ತಿಳಿಯುವರು.<br>2. ಬರೆದ ಮುದ್ರಿತ ರೂಪದಲ್ಲಿರುವ ಅಕ್ಷರ, ಶಬ್ದ ಮತ್ತು ವಾಕ್ಯಗಳ ಅಂಶಗಳನ್ನು ಗುರುತಿಸುತ್ತಾ, ಮುದ್ರಿತ ರೂಪದಲ್ಲಿರುವ ಅಕ್ಷರ, ಶಬ್ದ ಮತ್ತು ವಾಕ್ಯಗಳ ಅಂಶಗಳನ್ನು ಗುರುತಿಸುತ್ತಾರೆ |
| 13 | | ಅಬ್ಬಾಸ್ ಹಣ್ಣಿನ | 1. ಮಕ್ಕಳು ಹಣ್ಣುಗಳ ಪರಿಚಯವನ್ನು ಸ್ಮರಿಸಿಕೊಳ್ಳವರು.<br>2. . ಸರಳ ಪ್ರಶ್ನೆಗಳಿಗೆ ಹೌದು ಇಲ್ಲ ಅಥವಾ ಒಂದು ಪದದ ಮೂಲಕ |

| | | | |
|---|---|---|---|
| | | ಅಂಗಡಿ | ಉತ್ತರಿಸುತ್ತಾರೆ ಮತ್ತು ಪ್ರಶ್ನಿಸುವ ಕೌಶಲ ಬೆಳೆಸಿಕೊಳ್ಳುತ್ತಾರೆ. ತಾನೇ ರಚಿಸಿದ ಚಿತ್ರದ ಕೆಳಗೆ ಅದರ ಹೆಸರನ್ನು ಬರೆಯುತ್ತಾರೆ |
| 14 | | ಮೂಲದ ಮರಿ | 1. ಕ್ಷೇತ್ರ : ಆಲಿಸುವ ಕೌಶಲ್ಯ.<br>2. ಮೂಲದ ಜೀವನ ಶೈಲಿಯನ್ನು ತಿಳಿಯುವರು<br>3.ಚಿತ್ರಗಳ ಸೂಕ್ಷ್ಮ ಮತ್ತು ಪ್ರತ್ಯಕ್ಷ ಅಂಶಗಳ ಮೇಲೆ ಆಳವಾಗಿ ಅವಲೋಕನ ಮಾಡುತ್ತಾರೆ. ಚಿತ್ರವೊಂದರ ಪ್ರತ್ಯಕ್ಷ ವಿಷಯ ಮತ್ತು ಸೂಕ್ಷ್ಮ ವಿವರಗಳನ್ನು ಅವಲೋಕಿಸುತ್ತಾರೆ |
| 15 | ಭಾಗ-02 | ಶಂಕ್ರಪ್ಪನ ಮನೆ | 1. ಓದುವ ಕೌಶಲ<br>2. ಮಕ್ಕಳು ಕಲಿಯಬೇಕಾದ ಸಂಸ್ಕಾರಗಳ ಬಗ್ಗೆ ಅರ್ಥೈಸಿಕೊಳ್ಳುವರು<br>3.ತನ್ನ ಆಸು ಪಾಸಿನಲ್ಲಿ ತನ್ನ ಕೈಗೆ ಸಿಗುವ ತನಗೆ ಕಾಣಿಸುವ ಮುದ್ರಿತ ಅಕ್ಷರಗಳನ್ನು ಸಾಂದರ್ಭಿಕವಾಗಿ ಹೋಲಿಸಿ, ಅದರ ಅರ್ಥ ಮತ್ತು ಉದ್ದೇಶಗಳನ್ನು ಅಂದಾಜಿಸುತ್ತಾರೆ |
| 16 | | ಕೈತೊಳೆಯಬೇಕು | 1. ಕ್ಷೇತ್ರ ಆಲಿಸುವ ಮತ್ತು ಓದುವ ಕೌಶಲ್ಯ.2.<br>2. ದೈನಂದಿನ ಉತ್ತಮ ಅಭ್ಯಾಸಗಳನ್ನ ಕಲಿತುಕೊಳ್ಳುವರು<br>3. ತ್ಯಕ್ಷ ವಿಷಯ ಮತ್ತು ಸೂಕ್ಷ್ಮ ವಿವರಗಳನ್ನು ಅವಲೋಕಿಸುತ್ತಾರೆ. |
| 17 | | ಸಿಗಡಿ ಯಾಕೆ ಒಣಗಲಿಲ್ಲ? | 1. ಕ್ಷೇತ್ರ: ಓದು ಮತ್ತು ಬರೆಯುವ ಕೌಶಲ.<br>2. ಕೆಲಸ ಮತ್ತು ವೃತ್ತಿಗಳ ಬಗ್ಗೆ ತಿಳಿದುಕೊಳ್ಳುವರು<br>3.ಅಕ್ಷರ, ಪದ, ಸರಳ ವಾಕ್ಯಗಳನ್ನು ಸರಿಯಾದ ಗಾತ್ರ ಅಂತರದೊಂದಿಗೆ ಬರೆಯುತ್ತಾರೆ ಮತ್ತು ಓದುತ್ತಾರೆ |

## ಕಠಿಣತೆವಾರು ಪ್ರಶ್ನೆಗಳು

| ಕ್ರ. ಸಂ | ಪಾಠ/ ಪದ್ಯದ ಸಂಖ್ಯೆ | ಪ್ರಶ್ನೆಗಳ ಸಂಖ್ಯೆ | | |
|---|---|---|---|---|
| | | ಸರಳ | ಸಾದಾರಣ | ಕಠಿಣ |
| 01 | 01 | 1,2,3,6,7,8,17,18,19,20 | **4,5,9,10 11 21,22** | 12,13,14,15,16 |
| 02 | 02 | 1,2,3,4,5,6,7,8,12,13,14,15 | 9,10,11 | 16 |
| 03 | 03 | 1,2,3,4,5,6,7,8,9, | 10,11,12,13 | ----- |
| 04 | 04 | 1,2,3,4,8,9,13,14 | 5,6,7,10, | 11,12 |
| 05 | 05 | 1,2,3,4 | 5,6,7,8,9,10 | ____ |
| 06 | 06 | 1,2,4,5,8,9,12 | 3,6,7,10,11,13,14 | ____ |
| 07 | 07 | 3.4.5.6 7 9 10 | 1,2, | 11.12 |
| 08 | 08 | 1 2 3 4 5 12 13 | 6 7 8 9 10 11 14 15 | 16 |
| 09 | 09 | 6, 7, 11,12 | 8, 9, 13, 14 | 1 2 3 4 10 |
| 10 | 10 | 1,2,5,6,7,8,11,12,13 | 3,4,9,10,14,15,16 | ------ |
| 11 | 11 | 1,2,3,6,7.11,12 | 4,5,8,9,10,13,14 | -------- |
| 12 | 12 | 1,2,3,4,5,6,12,13 | 7,8,9,10,11,14 | |
| 13 | 13 | 1,2,3,6,7,13 | 4,5.8.9,10,14 | 11,12 |
| 14 | 14 | 5,6.7,11 | 1,2.8,9,10,12 | 3,4 |
| 15 | 15 | 1,2,3,6,7,13 | 4,5.8,9,10 | 11,12,14 |
| 16 | 16 | 1,2,3,4,8,14 | 6,7,9,10,11 | 5.12,13 |
| 17 | 17 | 1,2,3,7,8 | 4,5,9,10,11 | 6,12,13 |

# ನೀಲ ನಕ್ಷೆ

| ಕ್ರ. ಸಂ | ಪಾಠ/ ಪದ್ಯ | ಜ್ಞಾನ | | | ತಿಳುವಳಿಕೆ | | | ಕೌಶಲ್ಯ | | | ಪ್ರಸಂಸೆ | | | ಒಟ್ಟು | | | ಒಟ್ಟು | |
|---|---|---|---|---|---|---|---|---|---|---|---|---|---|---|---|---|---|---|
| | | ಬ, ಆ | ಕಿ. ಉ | ದೀ. ಉ | ಬ, ಆ | ಕಿ. ಉ | ದೀ. ಉ | ಬ, ಆ | ಕಿ. ಉ | ದೀ. ಉ | ಬ, ಆ | ಕಿ. ಉ | ದೀ. ಉ | ಬ, ಆ | ಕಿ. ಉ | ದೀ. ಉ | ಪ್ರಶ್ನೆ | ಅಂಕ |
| 01 | 01 | | 10(1 | | | 7(1) | | | | | | | 5(2) | | | | 22 | 28 |
| 02 | 02 | | 6(1) | | | 6(1) | | | | 3(2) | | | 1(3) | | | | 16 | 21 |
| 03 | 03 | | 4(1) | | | 5(1) | | | | 1(3) | 1(1) | | | | | | 13 | 13 |
| 04 | 04 | 2(1) | 7(1) | | | 5(1) | | | | | | | 2(2) | | | 2(2) | 14 | 16 |
| 05 | 05 | | 5(1) | | | 5(1) | | | | | | | | | | | 10 | 10 |
| 06 | 06 | | 7(1) | | | 7(1) | | | 1(2 | | | | 3(1) | | | | 14 | 14 |
| 07 | 07 | | 4(1) | | | (1) | | | 2(1 | | | | 1(3) | | | | 12 | 16 |
| 08 | 08 | | 7(1) | | . | 8(1) | | | | | | | | | | 1(3) | 16 | 23 |
| 09 | 09 | | 4(1) | | | 4(1) | | | | 3(2) | | | 2(3) | | | | 14 | 19 |
| 10 | 10 | | 7(1) | | | 5(1) | | | 2() | | | | 2(1) | | | | 16 | 16 |
| 11 | 11 | | 5(1) | | | 5(1) | | | 2(1) | | | | 2(1) | | | | 14 | 14 |
| 12 | 12 | | 5(1) | | | 4(1) | | 2(1) | 1(2) | | 2(1) | | 1(2) | | | | 14 | 14 |
| 13 | 13 | | 6(1) | | | 6(1) | | 1(1) | | | 1(1) | | | | | | 14 | 14 |
| 14 | 14 | | 4(1) | | | 4(1) | | | | 2(2) | | | 2(2) | | | | 12 | 14 |
| 15 | 15 | | 5(1) | | | 5(1) | | | 2(1) | | | 2(1) | | | | | 14 | 14 |
| 16 | 16 | | 5(1) | | | 5(1) | | | 2(1) | | | 2(1) | | | | | 14 | 14 |
| 17 | 17 | | 5(1) | | | 5(1) | | | 2(1) | | | 1(1) | | | | | 13 | 13 |

## 1. ವಂದನೆ (ಪದ್ಯ)

**I. ಹೊಂದಿಸಿ ಬರೆಯಿರಿ.** **4*1=4**

| | A | B |
|---|---|---|
| 1. | ರೈತ | ನಾಡಿನ ರಕ್ಷಣೆ ಮಾಡುವವ |
| 2. | ವೈದ್ಯ | ಅನ್ನದಾತ |
| 3. | ಯೋಧ | ವಿದ್ಯಾಬುದ್ಧಿ ಕಲಿಸುವವ |
| 4. | ಗುರು | ರೋಗ ವಾಸಿಮಾಡುವವ |

**II. ಒಂದು ವಾಕ್ಯದಲ್ಲಿಉತ್ತರಿಸಿರಿ.** **6*1=6**

5. ಅಮ್ಮನ್ನು ನಾವು ಚೆನ್ನಾಗಿ ನೋಡಿಕೊಳ್ಳಬೇಕು ಏಕೆ ?
6. ನಮ್ಮ ದೇಶವನ್ನು ಕಾಯುವವರು ಯಾರು ?
7. ಅಪ್ಪ ನಿನಗೆ ಏಕೆ ಇಷ್ಟ ?
8. ನವಮಾಸ ನಮ್ಮನ್ನು ಹೊತ್ತು ಹೆತ್ತವರು ಯಾರು ?
9. ನಿಮಗೆ ವಿದ್ಯಾಬುದ್ಧಿ ಕಲಿಸುವವರು ಯಾರು ?
10. ನಿಮಗೆ ಕಾಯಿಲೆ ಯಾದಾಗ ಯಾರ ಬಳಿ ಹೋಗುವಿರಿ ?

**III. ಆಶು ಭಾಷಣ.** **6*2=12**

11. ರೈತ-ನಾನು ರೈತನಾದರೆ ?
12. ವೈದ್ಯ-ನಾನು ವೈದ್ಯನಾದರೆ ?
13. ಶಿಕ್ಷಕ - ನಾನು ಶಿಕ್ಷಕನಾದರೆ ?
14. ಸೈನಿಕ - ನಾನು ಸೈನಿಕನಾದರೆ ?
15. ಬಡಗಿ - ನಾನು ಬಡಗಿಯಾದರೆ ?
16. ಪೋಲೀಸ್ - ನಾನು ಪೋಲಿಸನಾದರೆ?

**IV. ಮೊದಲೆರಡು ಪದಕ್ಕೆ ಸಹಸಂಬಂಧಿಸಿದಂತೆ ಮೂರನೇ ಪದಕ್ಕೆ ಸಂಬಂಧ ಕಲ್ಪಿಸಿ/ಹೇಳಿರಿ.** **2*1=2**

17.ರೈತ : ಅನ್ನದಾತ : : ಯೋಧ : __________

18. ಶಿಕ್ಷಕ : ವಿದ್ಯಾಬುದ್ಧಿ : : ವೈದ್ಯ : __________

**V. ಕೆಳಗೆ ಕೊಟ್ಟಿರುವ 4 ಉತ್ತರಗಳಲ್ಲಿ ಸರಿ ಉತ್ತರ ಆಯ್ಕೆ ಮಾಡಿ ಬರೆ.** **4*1=4**

19. ವಂದನೆ ಎಂದರೆ= ……………………………… ( ನಮಸ್ಕಾರ, ಸ್ವಾಗತ, ಒಳ್ಳೆಯದಾಗಲಿ, ಕುಳಿತುಕೊಳ್ಳಿ)

20. ಮಾಸ ಎಂದರೆ=……………………………………( ವಾರ, ತಿಂಗಳು, ವರ್ಷ, ದಿನ)

21. ಸಲಹು ಎಂದರೆ=………………………………( ಆರೈಕೆ, ಸೂಚನೆ, ಜನ್ಮನೀಡು, ಬುದ್ಧಿಹೇಳು)

22. ನಿತ್ಯ ಎಂದರೆ=……………………………………(ಸತ್ಯ, ಹಸಿರು, ನಿರಂತರ, ಪ್ರತಿದಿನ

# ಪಾಠ-02 ಸಹಕಾರ

**I. ಮೊದಲೆರಡು ಪದದ ಸಂಬಂಧದಂತೆ ಮೂರನೇ ಪದಕ್ಕೆ ಸಂಬಂಧಕಲ್ಪಿಸಿ ಹೇಳಿರಿ.** **4*1=4**

1. ತಾವರೆ : ಹೂವು :: ಸೇಬು : ________
2. ಕ್ಯಾರೆಟ್ : ತರಕಾರಿ :: ಪಾರಿವಾಳ : _________
3. ಹಳ್ಳಿ: ಕಡಿಮೆ ಮನೆ :: ಪಟ್ಟಣ : …………………….
4. ಪಕ್ಷಿ: ಮೊಟ್ಟೆ :: ಪ್ರಾಣಿ : ………………….

**II. ಹೊಂದಿಸಿ ಬರೆಯಿರಿ** **4*1=4**

5. ಗುಬ್ಬಚ್ಚಿ - ಧಾನ್ಯದ ಬೆಳೆ
6. ಸಂಗ್ರಹಿಸು- ಬೀಜ ಹಾಕು
7. ಬಿತ್ತು- ಒಂದು ಜಾತಿಯ ಸಣ್ಣ ಪಕ್ಷಿ
8. ಫೈರು- ಒಟ್ಟುಗೂಡಿಸು

**III. ಈ ಮಾತನ್ನು ಯಾರು ಯಾರಿಗೆ ಹೇಳಿದರು ತಿಳಿಸಿ.** **3*2=6**

9. "ಅಕ್ಕಾ ತಿನ್ನಲು ರಾಗಿಕೊಡು"
10. "ನೀವು ಬಿತ್ತಲು ಬರಲಿಲ್ಲ, ಕೊಯ್ಯಲು ಬರಲಿಲ್ಲ ನಿಮಗೇಕೆ ರಾಗಿ ಕೊಡಲಿ ?"
11. "ನನ್ನಿಂದ ಆಗದು"

**IV. ಒಂದು ವಾಕ್ಯದಲ್ಲಿ ಉತ್ತರಿಸಿರಿ.** **4*1=4**



12. ನೀನು ನಿಮ್ಮ ಅಮ್ಮಗೆ ಹೇಗೆ ಸಹಾಯ ಮಾಡುವಿರಿ ?
13. ನಿನ್ನ ಗೆಳೆಯನಿಗೆ ಹೇಗೆ ಸಹಾಯ ಮಾಡುತ್ತೀಯಾ ತಿಳಿಸು ?
14. ಮನೆಯಲ್ಲಿ ನಿನಗೆ ಯಾರು ಸಹಾಯ ಮಾಡುತ್ತಾರೆ ತಿಳಿಸು ?
15. ಕೋಳಿ ಮೊದಲು ರಾಗಿಯನ್ನು ಬಿತ್ತಲು ಯಾರ ಸಹಾಯವನ್ನು ಕೇಳಿತು ?

**V. ಈ ಕೆಳಗಿನ ಪದಗಳನ್ನು ಬಳಸಿ ಕಥೆಯನ್ನು ಕಟ್ಟಿರಿ.** **1*3=3**

16. ಕೋಳಿ, ರಾಗಿ, ಗುಬ್ಬಚ್ಚಿ, ಪಾರಿವಾಳ, ಹಸಿವು, ಸಹಾ

## ಪಾಠ/ಪದ್ಯ-03 ಊಟದ ಆಟ

**I. ಹೊಂದಿಸಿ ಬರೆಯಿರಿ.** **4*1=4**

| A | B |
|---|---|
| 1.  | ———— ಮೂರು |
| 2.  | —— ಒಂದು |
| 3.  | ———— ಎರಡೂ |
| 4.  | ———— ನಾಲ್ಕು |

**II. ಬಿಟ್ಟಿರುವ ಪದ್ಯದ ಸಾಲುಗಳನ್ನು ಹೇಳಿರಿ.** **6*1=6**

5. ಒಂದು ಎರಡು

_______ _______

6. ಮೂರು ನಾಲ್ಕು

_______ __________

7. ಐದು ಆರು

_______ _________

8. ಏಳು ಎಂಟು

______ _________

9. ಒಂಭತ್ತು ಹತ್ತು

______ ________

10. ಒಂದರಿಂದ ಹತ್ತು

________________

ಊಟದ ಆಟವು

________________

**III. ಈ ಕೆಳಗಿನ ಪದಗಳ ಅರ್ಥ ಬರೆಯಿರಿ** **3*1=3**

11. ತರಕಾರಿಯಿಂದ ಮಾಡಿದ ಪದಾರ್ಥ=
12. ಒಂದು ಜಾತಿಯ ತರಕಾರಿ ಸೊಪ್ಪು=
13. ಮುದಿರು=

## ಪಾಠ/ಪದ್ಯ-04 ಹೂದೋಟ

**I. ಕೆಳಗೆ ಕೊಟ್ಟಿರುವ ಸಾಲುಗಳಲ್ಲಿ ಒಳ್ಳೆಯ ಅಭ್ಯಾಸಗಳಿಗೆ ಸರಿ ಇಲ್ಲವೆ ತಪ್ಪು ಚಿಹ್ನೆ ಸೂಚಿಸಿ.** **7*1=07**

1. ನಾನು ದಿನಾಲೂ ಹಲ್ಲು ಉಜ್ಜುತ್ತೇನೆ.
2. ನಾನು ವಾರಕ್ಕೊಮ್ಮೆ ಸ್ನಾನ ಮಾಡುತ್ತೇನೆ.
3. ನಾನು ಪ್ರತಿದಿನ ವ್ಯಾಯಾಮ ಮಾಡುತ್ತೇನೆ.
4. ನಾನು ನನ್ನ ಗೆಳೆಯರ ಜೊತೆ ಸದಾ ಜಗಳ ಆಡುತ್ತೇನೆ.
5. ನಾನು ಪ್ರತಿ ದಿನ ದೇವರಿಗೆ ನಮಸ್ಕರಿಸುತ್ತೇನೆ.
6. ನಾನು ನಮ್ಮ ನಾಯಿಗೆ ಕೋಲಿನಿಂದ ಹೋಡೆಯುತ್ತೇನೆ.
7. ನಾನು ನನ್ನ ಅಪ್ಪ ಅಮ್ಮನಿಗೆ ದಿನಾಲೂ ನಮಸ್ಕರಿಸುತ್ತೇನೆ.

**II. ಚಿತ್ರ ನೋಡಿ ಉತ್ತರಿಸಿರಿ** **3*2=06**

8. ಹೂದೋಟದಲ್ಲಿ ಏನೇನು ಕಾಣುತ್ತಿದೆ ?
9. ಯಾರ-ಯಾರ ಜೊತೆ ಸಂಭಾಷಣೆ ನಡೆಯುತ್ತಿದೆ ?
10. ನೀನು ನೋಡಿರುವ ಹೂಗಳ ಹೆಸರನ್ನು ಹೇಳು ?

**III. ಸನ್ನಿವೇಶ ಕೊಟ್ಟು ಸಂಭಾಷಣೆ ಮಾಡಲು ತಿಳಿಸುವುದು.** **2*2=4**

11. ವೈದ್ಯ - ರೋಗಿ
12. ಶಿಕ್ಷಕ - ವಿದ್ಯಾರ್ಥಿ

### IV. ಕೆಳಗಿನ ಬಿಟ್ಟಸ್ಥಳವನ್ನು ಸೂಕ್ತ ಉತ್ತರ ಯ್ಕೆ ಮಾಡಿ ಭರ್ತಿ ಮಾಡಿ **2*2=4**

13. ಸದೃಢ ದೇಹದಲ್ಲಿ ಸದೃಢ……………………… ಇರುತ್ತದೆ.


( ಮನಸ್ಸು, ಹೃದಯ, ಮೆದುಳು, ಜ್ಞಾನ)

14. ಒಳ್ಳೆಯ ಅಭ್ಯಾಸಗಳಿಂದ ನಮಗೆ……………………….. ದೊರೆಯುತ್ತದೆ


( ಹಣ, ಆರೋಗ್ಯ, ಸಿಹಿ, ಕೀರ್ತಿ)


## ಪಾಠ/ಪದ್ಯ-05 ರೇಖಾಭ್ಯಾಸ ಪಾಠಗಳು


**I.** ಗೆರೆ ಎಳೆದು ಹೊಂದಿಸು **4*1=4**




**II.** ಈ ಕೆಳಗಿನ ರೇಖೆಗಳನ್ನು ನಕಲು ಮಾಡಿ ಬರೆ. **6*1=6**

**5.**  .......................... ..............................

**6.**  ......................... ................................

**7.**  ......................... ...............................

**8.**  ......................... ...............................

**9.**  ........................ ...............................

**10.**  ....................... ............................

## ಪಾಠ/ಪದ್ಯ-06 ಬೇಸಿಗೆ ರಜೆಯಲಿ (ಪದ್ಯ)

**I. ಪ್ರಾಸ ಪದಗಳನ್ನು ಹೊಂದಿಸಿ ಬರೆಯಿರಿ.** **3*1=3**

1. ರಜೆಯಲಿ - ಹೋಗುವೆನು
2. ದುಡಿಯುವೆನು - ಸೊಬಗನು
3. ಸವಿಯನು - ಜೊತೆಯಲಿ

**II. ಬಿಟ್ಟಿರುವ ಪದ್ಯದ ಸಾಲುಗಳ್ನು ಹೇಳಿರಿ.** **1*4=4**

4. ಬೇಸಿಗೆ ರಜೆಯಲಿ

_______________

5. ಹಳ್ಳಿಗೆ ಹೋಗುವೆನು

___________________

6. ರೈತರ ಜೊತೆಯಲಿ

____________________

ಮುಗಿಲು ಮುಟ್ಟುವ

7. _____________________

ಹಾಡನು ಹೇಳುವೆನು.

**III. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ.** **3*1=3**

8. ಕವಿಯು ಅಪ್ಪನ ಜೊತೆಯಲಿ ಎಲ್ಲಿಗೆ ಹೋದರು ?
9. ಕವಿಯು ಏನನ್ನು ಸವಿದರು ?
10. ಸೃಷ್ಠಿಯ ಸೊಬಗು ಹೇಗಿದೆ ?

**IV. ಈ ಕೆಳಗಿನ ಸಾಲನ್ನು ಗಟ್ಟಿಯಾಗಿ ಹೇಳಿರಿ.** **3*1=3**

11. ರೈತ ನಮ್ಮ ಅನ್ನದಾತ
12. ರೈತ ದೇಶದ ಬೆನ್ನೆಲಬು
13. ಜೈ ಜವಾನ್ ಜೈ ಕಿಸಾನ್

**V. ಈ ಕೆಳಗಿನ ಪದಗಳ ಅರ್ಥ ಬರೆಯಿರಿ.** **4*1=4**

11. ಕೃಷಿಕ=
12. ಮುಗಿಲು=
13. ಸೊಬಗು=
14.

## ಪಾಠ-07 ಕೋತಿ ಮತ್ತು ಅಳಿಲು

**I. ಈ ಮಾತನ್ನು ಯಾರು ಯಾರಿಗೆ ಹೇಳಿದರು ? ತಿಳಿಸಿ.** **2*2=4**

1. " ಈ ಜೋಕಾಲಿ ಎಷ್ಟು ಚೆಂದ"
2. "ತಂಗಿ ಏನು ಮಾಡುತ್ತಿರುವೆ ? ನನಗೆ ಕಚಗುಳಿಯಾಗುತ್ತಿದೆ."

**II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ.** **5*1=5**

3. ಕೋತಿಯ ಬಾಲ ಹೇಗಿತ್ತು ?

4. ಕುಣಿದಾಡುತ್ತಾ ಅಲ್ಲಿಗೆ ಬಂದವರು ಯಾರು ?

5. ಕಥೆಯಲ್ಲಿ ಬರುವ ಪ್ರಾಣಿಗಳನ್ನು ಹೆಸರಿಸಿರಿ ?

6. ಕೋತಿಗೆ ಇರುವ ಮತ್ತೊಂದು ಹೆಸರು ತಿಲಿಸಿ ?

7. ಅಳಿಲು ಕೋತಿಯನ್ನು ಕ್ಷಮಿಸು ಎಮದು ಏಕೆ ಕೇಳಿತು ?

**III. ಈ ಕೆಳಗಿನ ಪದಗಳನ್ನು ಬಳಸಿ ಕಥೆಯನ್ನು ಹೇಳಿ.** **1*3=3**

8. ಮರ, ಕೋತಿ, ಅಳಿಲು, ಜೋಕಾಲಿ, ಕಚಗುಳಿ

**IV. ಈ ಕೆಳಗಿನ ಪದ ಬಳಸಿ ಸ್ವಂತ ವಾಕ್ಯ ಮಾಡಿ** **2*1=2**

9. ಜೋಕಾಲಿ

10. ಅಳಿಲು

**V. ಈ ಕೆಳಗಿನ ಪದಗಳ ಅರ್ಥ ಬರೆಯಿರಿ.** **2*1=2**

11. ಗಾಬರಿ=

12. ಅಪರಾಧವನ್ನು ಮನ್ನಿಸು=

## ಪಾಠ-08  ಪದ ಓದು- ಅಕ್ಷರ ಕಲಿ

**I. ಹೊಂದಿಸಿ ಬರೆಯಿರಿ.** **5*1=5**

| A | B |
| --- | --- |
| 1. ರ | ದಸರ |
| 2. ಗ | ಅರ |
| 3. ಸ | ಗರಗಸ |
| 4. ದ | ಸರ |
| 5. ಅ | ರಸ |


**II. ಬಿಟ್ಟಿರುವ ಅಕ್ಷರವನ್ನು ಭರ್ತಿಮಾಡಿ** **6*1=6**

6. ಅವಸ….. (ರ, ನ, ಳ, ಮ)
7. ಗಾಳಿ……ಟ (ಕ, ಗ, ತ, ಪ)
8. ಕ……ರವ ( ಲ, ರ, ವ, ಕ)
9. …..ಕದಳ ( ಏ, ಪ, ಮ, ಯ)
10. ಜ……ರ ( ಗ, ಫ, ಠ, ರ)
11. ಅಂಗ…….. ( ಳ, ನ, ಮ, ಶ)

**III. ಈ ಕೆಳಗಿನ ಪದಗಳನ್ನು ನಕಲು ಮಾಡಿ 2 ಬಾರಿ ಬರೆಯಿರಿ.** **4*2=8**

12. ಬಸವ= ……………………… ………………………
13. ಹೊಸತು= ………………………….. …………………………….
14. ಔಡಲ= ……………………….. ……………………………….
15. ಕಂಪನ= ………………………. ……………………………..

**IV. 16. ಕೊಟ್ಟಿರುವ ಚಿತ್ರಕ್ಕೆ ಬಣ್ಣ ತುಂಬಿರಿ.** **1*4=4**



## ಪಾಠ-09 ಚಂದಿರನೇತಕೆ ಓಡುವನಮ್ಮ( ಪದ್ಯ)

### I. ಒಂದು ಅಥವಾ ಎರಡು ವಾಕ್ಯದಲ್ಲಿ ಉತ್ತರಿಸಿರಿ. 5*2=10

1. ಆಕಾಶದಲ್ಲಿರುವ ಚಂದಿರನನ್ನು ನೋಡಿದ್ದೀರಾ ?ಯಾವ ಸಮಯದಲ್ಲಿ ಚಂದಿರನನ್ನು ನೋಡಿದ್ದೀರಾ ?
2. ತಲೆಕಟ್ಟು ಇರುವ 10 ಅಕ್ಷರಗಳನ್ನು ಬರೆಯಿರಿ
3. ಕೆಳಗೆ ಕೊಟ್ಟಿರುವ ಪದಗಳನ್ನು ಗುಂಡಾಗಿ ಬರೆಯಿರಿ
   ಕೆರೆ, ಮೇಕೆ, ಸೈನಿಕ, ದೀಪ, ಪೈರು
4. ಕೊಟ್ಟರುವ ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸಿರಿ.
   ಕುರಿ, ಕೂಸು, ಕೃಷಿ, ಕೆರೆ, ಕೇಸರಿ, ಕೈ
5. ಆಕಾಶದಲ್ಲಿ ನೀವು ನೋಡಿರುವ ಆಕಾಶಕಾಯಗಳನ್ನು ಹೆಸರಿಸಿ.

### II. "ಈ" ಸ್ವರಾಕ್ಷರವಿರುವ ಪದಗಳಿಗೆ ಗೆರೆ ಎಳೆಯಿರಿ. 4*1=4

6. ಕಾಲ — ದೀಪ
7. ಬೀಟೆ — ಗಾನ
8. ಗಿಳಿ — ಗೀತೆ
9. ಮೀನು — ಗಿರಿ

### III.ಐತ್ವ ಇರುವ ಪದಗಳ ಕೆಳಗೆ ಗೆರೆ ಎಳೆಯಿರಿ.

**1*1=1**

10. ಭೇಟಿ, ಡೈರಿ, ನೈದಿಲೆ, ಬೆಣ್ಣೆ, ತೈಲ

### IV . ಹೊಂದಿಸಿ ಬರೆಯಿರಿ 4*1=4

11. ಚಂದಿರ ಶಾಖ

12. ಮೋಡ ಅಲೆಗಳು

13 ಸಮುದ್ರ ಮಳೆ

14. ಸೂರ್ಯ ಬೆಳದಿಂಗಳು

# ಪಾಠ-10 ಗುಣಿತಾಕ್ಷರಗಳು

**I. ಹೊಂದಿಸಿ ಬರೆಯಿರಿ** **4*1=4**

1. ಕಮಲ- ಔ
2. ಕೃಷಿ- ಓ
3. ದೋಣಿ- ಅ
4. ನೌಕೆ- ಋ

**II. ಬಿಟ್ಟ ಸ್ಥಳವನ್ನು ಸೂಕ್ತ ಗುಣಿತಾಕ್ಷರದಿಂದ ಭರ್ತಿ ಮಾಡಿ:** **6*1=6**

5. ಕ ಕ್ಕೆ ತಲೆಕಟ್ಟು………………………..
6. ಕ ಕ್ಕೆ ಗುಡಿಸಿನ ದೀರ್ಘ……………………..
7. ಕ ಕ್ಕೆ ವಟ್ರುಸುಳಿ………………………
8. ಕ ಕ್ಕೆ ಐತ್ವ…………………………..
9. ಕ ಕ್ಕೆ ಔತ್ವ…………………………….
10. ಕ ಕ್ಕೆ ಕೊಂಬು………………

**III. ಈ ಕೆಳಗಿನ ಪದಗಳನ್ನು 2 ಬಾರಿ ನಕಲು ಮಾಡಿ ಬರೆ** **6*1=6**

11. ಆಕಳು= …………………….. ……………………..
12. ನೇಗಿಲು= ……………………… ………………………
13. ಕುದುರೆ= ……………………… ………………………
14. ಭಟ= ……………………….. ………………………...
15. ಯಂತ್ರ= ……………………… ………………………
16. ಜಳಕ= ………………………... ………………………

## ಪಾಠ-11 ವಿವೇಕಾನಂದರ ಜನುಮ ದಿನ

**I. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ** **5*1=5**

1. ನಾರಾಯಣ ಗುರುಗಳು ಏನನ್ನು ಬೆಳಗಿದರು. ?

2.ರಾಜನು ಏನು ಮಾಡಿದನು ?

3. ಪೀಟರ್ ಏನು ಮಾಡಿದನು ?

4. ನಿಮ್ಮ ಶಾಲೆಯಲ್ಲಿ ಆಚರಿಸುವ ದಿನಾಚರಣೆಗಳನ್ನು ಹೇಳಿ ?

5. ಸಿ.ಹಿ.ತಿMಡಿ ಯಾರು ಹಂಚಿದರು ?

**II. ಇವುಗಳಲ್ಲಿ ಸರಿಯಾದ ಪದ ಆರಿಸಿ ವೃತ್ತ ಹಾಕಿ** **5*1=5**

6. ಗೋಡೆ — ಗೊಡೆ
7. ಟೋಪಿ — ಟೊಪಿ

8. ಕೊತಿ — ಕೋತಿ

9. ಜೊಗುಳ — ಜೋಗುಳ

10. ದೇಶ— ದೆಶ

**III. ಆವರಣದಿಂದ ಸೂಕ್ತ ಅಕ್ಷರವನ್ನು ಆರಿಸಿ ಪೂರ್ಣಗೊಳಿಸಿ.** **4*1=4**

11 ._____ಗಾರಿಕೆ (ರೈ, ಕೈ, ಗೈ)

12._____ಸೆ (ರೈ, ಪೈ)

13.______ದಿಲೆ (ನೈ, ಮೈ, ಸೈ)

14._______ನು (ಹೈ, ರೈ, ಸೈ)

# ಪಾಠ-12 ಒತ್ತಕ್ಷರಗಳು

**I. ಒತ್ತಕ್ಷರಗಳು ಇರುವ 5 ಪದಗಳನ್ನು ಬರೆಯಿರಿ** **5*1=5**

1.

2.

3.

4.

5.

**II. ಕೊಟ್ಟಿರುವ ಒತ್ತಕ್ಷರಗಳಲ್ಲಿ ಸಜಾತಿ ಮತ್ತು ವಿಜಾತಿ ಒತ್ತಕ್ಷರಗಳನ್ನು ಪ್ರತ್ಯೇಕಿಸಿ ಬರೆಯಿರಿ** **2*3=6**

**( ಕ್ಕ, ಜ್ರ, ಲ್ಲ, ಗ್ಗ, ಸ್ತ, ದ್ದ, ನ್ನ, ಯ್ಯ, ಳ್ಳ ದೃ ಪ್ವ, ತ್ಯ, ಜ್ಜ, ಸ್ಸ, ಸ್ಥ )**

6. ಸಜಾತಿ ಒತ್ತಕ್ಷರಗಳು-

7. ವಿಜಾತಿ ಒತ್ತಕ್ಷರಗಳು-

**III. ಕೆಳಗೆ ಕೊಟ್ಟಿರುವ ಒತ್ತಕ್ಷರವುಳ್ಳ ಅಕ್ಷರಗಳಿಗೆ 2 ಪದಗಳನ್ನು ಬರೆಯಿರಿ** **3*2=6**

ಉದಾ :ಕ್ಕ -ಅಕ್ಕ, ಪಕ್ಕ

8. ಣ್ಣ :-

9. ಬ್ಬ :-

10. ಜ್ಜ :-

**IV. ಹೊಂದಿಸಿ ಬರೆಯಿರಿ** **4*1=4**

11. ಕನ್ನಡ- ‘ಞ’ ಒತ್ತಕ್ಷರ

12. ಉಯ್ಯಾಲೆ- ‘ರ’ಒತ್ತಕ್ಷರ

13. ವಿಜ್ಞಾನ- ‘ಯ’ ಒತ್ತಕ್ಷರ

14. ಶ್ರವಣ- ‘ನ’ ಒ

# ಪಾಠ-13 ಅಬ್ಬಾಸ್ ಹಣ್ಣಿನ ಅಂಗಡಿ

## I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ಸಾಲಿನಲ್ಲಿ ಉತ್ತರಿಸಿ 5*1=5

1. ಹಣ್ಣಿನ ಅಂಗಡಿಯಲ್ಲಿ ನಿನಗೆ ಇಷ್ಟವಾದ ಹಣ್ಣು ಯಾವುದು?
2. ಮನೆಯಲ್ಲಿ ಬೆಳೆಯಬಹುದಾದ ಹಣ್ಣುಗಳನ್ನು ಹೆಸರಿಸಿ?
3. ಬಾಳೆಹಣ್ಣು ಯಾವ ಬಣ್ಣ ಹೊಂದಿರುತ್ತದೆ?
4. ಒಂದು ಪರಂಗಿ ಹಣ್ಣಿಗೆ ಎಷ್ಟು ರೂಪಾಯಿಗಳು?
5. ಒಂದು ಮೂಸಂಬಿ ಹಣ್ಣಿಗೆ ಎಷ್ಟು ರೂಪಾಯಿಗಳು?

## II. ಹೊಂದಿಸಿ ಬರೆಯಿರಿ. 4*1=4

6. ಸೀಬೆ- ಕೇಸರಿ
7. ಸೇಬು- ಹಳದಿ
8. ಬಾಳೆಹಣ್ಣು- ಹಸಿರು
.9. ಕಿತ್ತಳೆ- ಕೆಂಪು

## III. ಗುಂಪಿಗೆ ಸೇರದ ಪದಕ್ಕೆ ವೃತ್ತ ಹಾಕಿ. 5*1=5

10. ಸೀತಾಫಲ, ಸಪೋಟ, ಕ್ಯಾರೇಟ್, ಮಾವಿನಹಣ್ಣು
11. ದ್ರಾಕ್ಷಿ, ಮೂಸಂಬಿ, ಕಿತ್ತಳೆ, ಆಲೂಗೆಡ್ಡೆ
12. ಪಪ್ಪಾಯ, ಬಾಳೆಹಣ್ಣು, ಸೇಬು, ಮೊಟ್ಟೆ
13. ದಾಳಿಂಬೆ, ಸ್ಟ್ರಾಬೆರಿ, ಅನಾನಸ್, ಲಿಂಬು.
14. ಗೋಡಂಬಿ, ಕೀವಿಹಣ್ಣು, ಬೀನ್ಸ್, ಡ್ರ್ಯಾಗನ್ ಹಣ್ಣು.

# ಪಾಠ-14 ಮೊಲದ ಮರಿ

1.

**I. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯದಲ್ಲಿ ಉತ್ತರಿಸಿ.** **4*2=8**

1. ನೀವು ನೋಡಿರುವ ಸಾಕು ಪ್ರಾಣಿಗಳನ್ನು ಹೆಸರಿಸಿರಿ.
2. ನಿಮಗೆ ಇಷ್ಟವಾದ ಸಾಕು ಪ್ರಾಣಿಗಳನ್ನು ಹೆಸರಿಸಿರಿ.
3. ಕಾಡಿನಲ್ಲಿ ವಾಸಿಸುವ ಯಾವುದಾದರೂ 02 ಕಾಡು ಪ್ರಾಣಿಗಳ ಹೆಸರನ್ನು ತಿಳಿಸಿರಿ.
4. ನಮಗೆ ಇಷ್ಟವಾದ ಪ್ರಾಣಿಯ ಚಿತ್ರವನ್ನು ಬಿಡಿಸಿ ಬಣ್ಣ ಹಾಕಿರಿ.

**II. ಈ ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣಗೊಳಿಸಿ** **4*1=4**

5. ಮೊಲದ ಮರಿ ಮೊಲದ ಮರಿ ಆಡ ಬಾರೆ
   ……………… ……………………… …………… ನೆಗೆದು ಬಾರೆ.
6. ಪೊದರಿನಿಂದ ಪೊದರ ಬಳಿಗೆ ನಿನ್ನ ಆಟ
   ……………… ……………………… ………… ಸೊಗಸಿನೂಟ
7. ಗಿಡ್ಡ ಬಾಲ ದೊಡ್ಡ ಕಿವಿಯು ನಿನಗೆ ಚಂದ
   ……………… ……………………… …………… ಆಡೋ ಕಂದ
8. ಮುದ್ದು ಮುದ್ದು ಮಾತುಗಳನು ನಿನಗೆ ಕಲಿಸುವೆ
   ………………… …………………… ……………...ನಿನ್ನ ಸಲಹುವೆ.

**III. ಈ ಪದ್ಯದಲ್ಲಿ ಬರುವ ಪ್ರಾಸ ಪದಗಳನ್ನು ಗುರುತಿಸಿ ಗೆರೆ ಎಳೆದು ಜೋಡಿಸಿ** **4*1=4**

| | |
|---|---|
| 9. ಆಡ ಬಾರೆ- | ನಿನ್ನ ಸಲಹುವೆ |
| 10. ನಿನ್ನ ಆಟ- | ನೆಗೆದು ಬಾರೆ |
| 11. ನಿನಗೆ ಚಂದ- | ಸೊಗಸಿನೂಟ |
| 12. ನಿನಗೆ ಕಲಿಸುವೆ- | ಆಡೋ ಕಂದ |

## ಪಾಠ-15 ಶಂಕ್ರಪ್ಪನ ಮನೆ

**I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ** **7*2=14**

1. ನಿಮ್ಮ ಮನೆಯಲ್ಲಿ ವಾಸಿಸುವ ಸದಸ್ಯರ ಹೆಸರನ್ನು ಹೇಳಿ ?
2. ನಿನ್ನ ಸ್ನೇಹಿತರ ಜೊತೆ ಯಾವ ಸಮಯದಲ್ಲಿ ಆಟ ಆಡುವೆ ?
3. ನಿನಗೆ ಇಷ್ಟವಾದ ಆಟವನ್ನು ಬರೆಯಿರಿ ?
4. ನೀನು ಶಾಲೆಯಲ್ಲಿ ಯಾವ ಯಾವ ಆಟಗಳನ್ನು ಆಡುವೆ ?
5. ನಿಮ್ಮ ಮನೆಗೆ ಬರುವ ಅತಿಥಿಗಳನ್ನು ನೀವು ಹೇಗೆ ಸತ್ಕರಿಸುತ್ತೀರಾ ?ತಿಳಿಸಿ
6. ನಿಮ್ಮ ಮನೆಯಲ್ಲಿರುವ ನಿಮ್ಮ ಅಕ್ಕ, ಅಣ್ಣ, ತಂಗಿ, ತಮ್ಮ ಇವರ ಹೆಸರನ್ನು ಹೇಳಿ.
7. ಕೆಳಗಿನ ಆಟಗಳಲ್ಲಿ ಹೊರಾಂಗಣಾಟ ಹಾಗೂಒಳಾಂಗಣಾಟಗಳನ್ನು ಗುರುತಿಸಿ ಹೇಳು

   ಖೋ-ಖೋ, ಕಬ್ಬಡ್ಡಿ, ಹಾವು-ಏಣಿಆಟ, ಚೆಸ್,ಕೇರಂ, ವಾಲಿಬಾಲ್

**II. ಈ ಕೆಳಗಿನ ವಾಕ್ಯಗಳನ್ನು ಓದಿ ಸರಿ ತಪ್ಪು ಗುರುತಿಸಿ ಬರೆ** **4*1=4**

8. ಮನೆಗೆ ಬಂದ ಅತಿಥಿಗಳನ್ನ ಗೌರವದಿಂದ ಸತ್ಕರಿಸಬೇಕು
9. ಮಕ್ಕಳು ಉತ್ತಮ ಸಂಸ್ಕಾರವನ್ನು ಕಲಿಯಬಾರದು
10. ತಂದೆ ತಾಯಿ ಹೇಳಿದ ಮಾತುಗಳನ್ನು ಮಕ್ಕಳು ಪಾಲಿಸಬೇಕು
11. ವಿದ್ಯೆಯ ಜೊತೆಗೆ ವಿನಯತೆ ಇರಬೇಕು

**III. ಈ ಕೆಳಗಿನ ಸಂಬಂದಗಳ ಹೆಸರು ಬರೆಯಿರಿ** **3*1=3**

12. ನಿನ್ನ ತಂದೆಯ ತಮ್ಮ ನಿನಗೆ ಏನಾಗಬೇಕು
13. ನಿನ್ನ ತಾಯಿಯ ತಮ್ಮ ನಿನಗೆ ಏನಾಗಬೇಕು
14. ಅಪ್ಪನ ತಂದೆ ನಿನಗೆ ಏನಾಗಭೆಕು

## ಪಾಠ-16 ಕೈತೊಳೆಯಬೇಕು

**I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ** **4*1=4**

1. ನಿಮ್ಮ ಮನೆಯಲ್ಲಿ ತಯಾರಿಸುವ ತಿಂಡಿಗಳನ್ನು ಹೆಸರಿಸಿರಿ ?
2. ನಿಮಗೆ ಇಷ್ಟವಾದ ತಿಂಡಿ ಯಾವುದು
3. ನಾವು ನಿತ್ಯ ಸ್ನಾನಮಾಡ ಬೇಕು ಏಕೆ ?
4. ನಮಗೆ ಕಾಯಿಲೆ ಬರಲು ಕಾರಣವೇನು ?

**II. ಹೊಂದಿಸಿ ಬರೆಯಿರಿ** **6*1=6**

5. ಮೂಗು ---- ಬರೆಯಲು

6. ಕೈಗಳು ---- ವಾಸನೆ ಕಂಡು ಹಿಡಿಯಲು

7. ಕಣ್ಣು --- ಕೇಳಲು

8. ಕಿವಿ --- ನೋಡಲು

9. ಕಾಲು --- ತಿನ್ನಲು

10. ಬಾಯಿ --- ನಡೆಯಲು

**III. ಈ ಕೆಳಗಿನ ಸಾಲುಗಳನ್ನು ಪೂರ್ಣಗೊಳಿಸಿ** **4*1=4**

11. ಆರೋಗ್ಯವೇ.................................................

( ಭಾಗ್ಯ, ಹಣ, ಗುಣ, ಅಂತಸ್ತು)

12. ಸ್ವಚ್ಛತೆಯೇ ........................................................

( ಪುಣ್ಯ, ದೇವರು, ಅನಾರೋಗ್ಯ, ಯಶಸ್ಸು)

13. ಮನೆಯೆ ಮೊದಲ.............................................

( ಪಾಠ ಶಾಲೆ, ಆಟದ ಮೈದಾನ, ದೇವಾಲಯ, ಆಸ್ಪತ್ರೆ)

14. ವಿದ್ಯೆಗೆ .................................................ಭೂಷಣ

( ಅಂಕವೆ, ಸಮವಸ್ತ್ರವೆ, ವಿನಯವೆ, ಹಣವೆ)

## ಪಾಠ-17 ಸಿಗಡಿ ಯಾಕೆ ಒಣಗಲಿಲ್ಲ?

**I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ** **5*1=5**

1. ನಿಮ್ಮ ಮನೆಯಲ್ಲಿ ತಂದೆ-ತಾಯಿಗಳು ಮಾಡುವ ಉದ್ಯೋಗವೇನು ?
2. ಮೀನುಗಳು ಎಲ್ಲೆಲ್ಲಿ ಸಿಗುತ್ತವೆ ?
3. ನಿಮ್ಮ ಮನೆಯಲ್ಲಿ ಯಾರುಯಾರು ಯಾವ ಕೆಲಸವನ್ನು ಮಾಡುತ್ತಾರೆ ?
4. ನಿಮ್ಮ ಮನೆಯಲ್ಲಿ ಸಾಕು ಪ್ರಾಣಿ ಇವೆಯಾ ?
5. ನಿಮ್ಮ ಮನೆಯ ಕೆಲಸದಲ್ಲಿ ನೀನೇನು ಸಹಾಯ ಮಾಡುವೆ ?

**II. ಹೊಂದಿಸಿ ಬರೆಯಿರಿ.** **4*1=4**

6. ಕಡಲು- ಮೀನು ಹಿಡಿಯುವವನು
7. ಸಿಗಡಿ- ಸಮುದ್ರ
8. ಬೆಸ್ತ- ಮಾರುವ ಜಾಗ
9. ಪೇಟೆ- ಒಂದು ಬಗೆಯ ಮೀನು

**III. ಈ ಕೆಳಗಿನ ಸಾಲುಗಳನ್ನು ಯಥಾ ಪ್ರಕಾರ ನಕಲು ಮಾಡಿ ಬರೆ.** **4*1=4**

10. ಒಂದು ಊರಲ್ಲಿ ಕಡಲಿನ ದಡದ ಮೇಲೆ ಒಂದು ಗುಡಿಸಲು ಇತ್ತು.

………………………………………………………………………………………………

11. “ಹುಲ್ಲೇ, ಹುಲ್ಲೇ, ನೀನು ಯಾಕೆ ಬಿಸಿಲಿಗೆ ಅಡ್ಡವಾದೀ?”

………………………………………………………………………………………………..

12. “ಇರುವೆಯೇ, ಇರುವೆಯೇ ನೀನು ಯಾಕೆ ಮಗುವನ್ಉು ಕಚ್ಚಿದೆ?”

……………………………………………………………………………………………..

13. ಮುದುಕಿ ಸಿಗಡಿಯನ್ನು ಒಂದು ಗೋರಿ ಒಳಗೆ ತೆಗೆದುಕೊಂಡು ಹೋದಳು.

…………………………………………………………………………………………………………..

# ಕೀ ಉತ್ತರಗಳು

## ಪಾಠ- 1. ವಂದನೆ (ಪದ್ಯ)

**I.** 1. ಅನ್ನದಾತ

2. ರೋಗ ವಾಸಿಮಾಡುವವ

3. ನಾಡಿನ ರಕ್ಷಣೆ ಮಾಡುವವ

4. ವಿದ್ಯಾಬುದ್ಧಿ ಕಲಿಸುವವ

**II.**

5. ನಮ್ಮನ್ನು ನವಮಾಸ ಹೊತ್ತು ಹೆತ್ತವಳು ತಾಯಿ ಆದ್ದರಿಂದ ಚೆನ್ನಾಗಿ ನೋಡಿಕೊಳ್ಳಬೇಕು.

6. ನಮ್ಮ ದೇಶವನ್ನು ಕಾಯುವವರು ಸೈನಿಕ.

7. ಅಪ್ಪ ಕಷ್ಟಪಟ್ಟು ದುಡಿದು ಬೆಳಸಿದ ತಂದೆ ಅದಕ್ಕಾಗಿ ಇಷ್ಟ.

8. ನವಮಾಸ ಹೊತ್ತು ನಮ್ಮನ್ನು ಹೆತ್ತವರು ತಾಯಿ.

9. ನಮಗೆವಿದ್ಯಾ ಬುದ್ಧಿ ಕಲಿಸುವವರು ಗುರು.

10. ನಮಗೆ ಕಾಯಿಲೆಯಾದಾಗ ವೈದ್ಯರ ಬಳಿ ಹೋಗುತ್ತೇವೆ.

**III.**

11. ಹೊಲದಲ್ಲಿ ಕೆಲಸಮಾಡಿ ಉತ್ತಮವಾಗಿ ಬೆಳೆಗಳನ್ನು ಬೆಳೆಯುತ್ತೇನೆ

12. ರೋಗಿಗಳಿಗೆ ಸರಿಯಾದ ಚಿಕಿತ್ಸೆ ಕೊಡುತ್ತೇನೆ.

13. ಮಕ್ಕಳಿಗೆ ಚೆನ್ನಾಗಿ ಓದಲು ಬರೆಯಲು ಕಲಿಸುತ್ತೇನೆ.

14. ಶತೃಗಳಿಂದ ದೇಶದ ರಕ್ಷಣೆ ಮಾಡುತ್ತೇನೆ.

15. ಮರದ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡುತ್ತೇನೆ.

16. ಜನಗಳ ರಕ್ಷಣೆಯನ್ನು ಮಾಡುತ್ತೇನೆ.

**IV**

17. ನಾಡಿನ ರಕ್ಷಣೆ

18. ಚಿಕಿತ್ಸೆ

**V**

19. ನಮಸ್ಕಾರ

20. ತಿಂಗಳು.

21. ಆರೈಕೆ

22. ಪ್ರತೀದಿನ

## ಪಾಠ-02 ಸಹಕಾರ

## I.

1. ಹಣ್ಣು
2. ಪಕ್ಷಿ
3. ಹೆಚ್ಚು ಮನೆಗಳು
4. ಮರಿ

## II.

5. ಒಂದು ಜಾತಿಯ ಸಣ್ಣ ಪಕ್ಷಿ
6. ಒಟ್ಟುಗೂಡಿಸು
7. ಬೀಜಹಾಕು
8. ಧಾನ್ಯದ ಬೆಳೆ

## III.

9. ಗುಬ್ಬಚ್ಚಿ ಮತ್ತು ಪಾರಿವಾಳಗಳು ಈ ಮಾತನ್ನು ಕೋಳಿಗೆ ಹೇಳಿದವು.
10. ಕೋಳಿಯು ಈ ಮಾತನ್ನು ಗುಬ್ಬಚ್ಚಿ ಮತ್ತು ಪಾರಿವಾಳಗಳಿಗೆ ಹೇಳಿತು.
11. ಗುಬ್ಬಚ್ಚಿ ಮತ್ತು ಪಾರಿವಾಳಗಳು ಈ ಮಾತನ್ನು ಕೋಳಿಗೆ ಹೇಳಿದವು.

## IV.

12. ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಕೊಟ್ಟು ಸಹಾಯ ಮಾಡುವೆ
13. ಓದಲು ಬರೆಯಲು ಸಹಾಯ ಮಾಡುವೆ ಜೊತೆಗೆ ಆಟವಾಡುವಾಗ ಸಹಾಯ ಮಾಡುವೆ.
14. ಮನೆಯಲ್ಲಿ ಅಪ್ಪ ಅಮ್ಮ ಸಹಾಯ ಮಾಡುತ್ತಾರೆ.
15. ಕೋಳಿ ರಾಗಿಯನ್ನು ಬಿತ್ತಲು ಮೊದಲು ಗುಬ್ಬಚ್ಚಿಯ ಸಹಾಯ ಕೇಳಿತು

## V.

16. ಮಕ್ಕಳು ತಮ್ಮ ತಮ್ಮ ಶೈಲಿಯಲ್ಲಿ ಕಥೆಯನ್ನು ಪದಗಳನ್ನು ಬಳಸಿ ಮಾಡುವರು.

**ಪಾಠ/ಪದ್ಯ-03 ಊಟದ ಆಟ**

# I.

1. ಎರಡೂ
2. ನಾಲ್ಕು
3. ಮೂರು
4. ಒಂದು

**II.**

5. ಬಾಳೆಲೆ ಹರಡು
6. ಅನ್ನ ಹಾಕು
7. ಬೇಳೆ ಸಾರು
8. ಪಲ್ಯಕೆ ದಂಟು
9. ಎಲೆ ಮುದಿರೆತ್ತು
10. ಹೀಗಿತ್ತು- ಮುಗಿದಿತ್ತು

**III.**

11. ಪಲ್ಯ
12. ದಂಟು
13. ಮುದಿರು

## ಪಾಠ/ಪದ್ಯ-04 ಹೂದೋಟ

**I.**

1. ಸರಿ
2. ತಪ್ಪು
3. ಸರಿ
4. ತಪ್ಪು
5. ಸರಿ
6. ತಪ್ಪು
7. ಸರಿ

**II.**

8. ಹೂವಿನ ಗಿಡಗಳು, ಆಟದ ಸಾಮಗ್ರಿಗಳು, ಮರಗಳು ಇತ್ಯಾದಿ.
9. ಅಜ್ಜಿ ಮತ್ತು ಸುಮಾಳ ನಡುವೆ ಸಂಭಾಶಣೆ ನೆಡೆಯುತ್ತಿದೆ.
10. ದಾಸವಾಳ, ಗುಲಾಬಿ, ಮಲ್ಲಿಗೆ, ಸಂಪಿಗೆ ಮುಂತಾದವು

**III.**

11. ವೈದ್ಯ ರೋಗಿಯ ಸ್ವ-ಕಲ್ಪಿತ ಸಂಭಾಷಣೆ ಬರೆಯುವರು.
12. ಶಿಕ್ಷಕ-ವಿದ್ಯಾರ್ಥಿಯ ಸ್ವ-ಕಲ್ಪಿತ ಸಂಭಾಷಣೆ ಬರೆಯುವರು

**IV.**

13. ಮನಸ್ಸು
14. ಆರೋಗ್ಯ

# ಪಾಠ-5 ರೇಖಾಭ್ಯಾಸ ಪಾಠಗಳು

**I.** ಗೆರೆ ಎಳೆದು ಹೊಂದಿಸು **4*1=4**

**A** B


1. 


2. 


3. 

4. 

**II.** ಈ ಕೆಳಗಿನ ರೇಖೆಗಳನ್ನು ನಕಲು ಮಾಡಿ ಬರೆ. **6*1=6**

**5.**  ......................... ............................

**6.**  ........................ ...............................

**7.**  ........................ ..............................

**8.**  ........................ ..............................

**9.**  ....................... ..............................

**10.**  ...................... ...........................

## ಪಾಠ-6 ಬೇಸಿಗೆ ರಜೆಯಲಿ (ಪದ್ಯ)

**I.**

1. ಜೊತೆಯಲಿ
2. ಹೋಗುವೆನು
3. ಸೊಬಗನು

**II.**

4. ಅಪ್ಪನ ಜೊತೆ ನಾ,

   ನಾನು ದುಡಿಯುವೆನು,

   ಎತ್ತರ ದನಿಯಲಿ

**III.**

5. ಹಳ್ಳಿಗೆ ಹೋದರು
6. ತೋಟದಿ ಬೆಳೆದಿಹ ಬಗೆ ಬಗೆ ಹಣ್ಣಿನ ಸವಿಯನು ಸವಿದರು
7. ಸೃಷ್ಠಿಯ ಸೊಬಗು ಹಚ್ಚನೆ ಹಸುರಿನಿಂದ ಸುಂದರವಾಗಿದೆ

**IV.**

8. ಗಟ್ಟಿಯಾಗಿ ಹೇಳುವರು
9. ಗಟ್ಟಿಯಾಗಿ ಹೇಳುವರು
10. ಗಟ್ಟಿಯಾಗಿ ಹೇಳುವರು

**V.**

11. ರೈತ
12. ಆಕಾಶ
13. ಚಂದ
14. ರುಚಿ

## ಪಾಠ-07 ಕೋತಿ ಮತ್ತು ಅಳಿಲು

**I.**

1. ಈ ಮಾತನ್ನು ಕೋತಿ ತನ್ನ ಮನಸ್ಸಿನಲ್ಲೆ ಹೇಳಿಕೊಂಡಿತು.

2. ಈ ಮಾತನ್ನು ಕೋತಿಯು ಅಳಿಲಿಗೆ ಹೇಳಿತು.

**II.**

3. ಕೋತಿಯ ಬಾಲ ತುಂಬಾ ಉದ್ದವಿತ್ತು

4. ಅಳಿಲು ಕುಣಿದಾಡುತ್ತಾ ಅಲ್ಲಿಗೆ ಬಂದಿತು

5. ಅಳಿಲು ಮತ್ತು ಕೋತಿ

6. ಮಂಗಣ್ಣ

7. ಮಂಗಣ್ಣನ ಬಾಲವನ್ನು ಜೋಕಾಲಿ ಎಂದು ಜೀಕುತ್ತಿತ್ತು ಅದಕ್ಕೆ ಕ್ಷಮೆ ಕೇಳಿತು.

**III.**

8. ಮಕ್ಕಳು ತಮ್ಮ ಸಾಮರ್ಥ್ಯಾನುಸಾರ ಪದ ಬಳಸಿ ಕಥೆ ಹೇಳುವರು.

**IV.**

9. ಕೋತಿಯ ಬಾಲದಿಂದ ಅಳಿಲು ಜೋಕಾಲಿ ಆಡಿತು

10. ಅಳಿಲು ಮರದ ಮೇಲೆ ವಾಸವಾಗಿತ್ತು.

**V.**

11. ಹೆದರಿಕೆ

12. ಕ್ಷಮಿಸು

# ಪಾಠ-08    ಪದ ಓದು- ಅಕ್ಷರ ಕಲಿ

## I.

1. ರಸ
2. ಗರಗಸ
3. ಸರ
4. ದಸರ
5. ಅರ

## II.

6. ಅವಸರ
7. ಗಾಳಿಪಟ
8. ಕಲರವ
9. ಏಕದಳ
10. ಜಠರ
11. ಅಂಗಳ.

## III.

12. ಬಸವ,  ಬಸವ
13. ಹೊಸತು, ಹೊಸತು
14. ಔಡಲ, ಔಡಲ
15. ಕಂಪನ, ಕಂಪನ

## IV.

ಕೊಟ್ಟಿರುವ ಚಿತ್ರಕ್ಕೆ ತಮ್ಮ ಕಲ್ಪನೆಯಂತೆ ಬಣ್ಣ ತುಂಬುವರು.

# ಪಾಠ-09 ಚಂದಿರನೇತಕೆ ಓಡುವನಮ್ಮ( ಪದ್ಯ)

## I.

1. ರಾತ್ರಿ ಸಮಯದಲ್ಲಿ ನೋಡಿದ್ದೇವೆ
2. ಮಕ್ಕಳು ಅವರ ಇಚ್ಚೆಯಂತೆ  ಬರೆಯುವರು
3. ಕೆರೆ, ಮೇಕೆ, ಸೈನಿಕ, ದೀಪ, ಪೈರು
4. ಕುರಿ, ಕೂಸು, ಕೃಷಿ, ಕೆರೆ, ಕೇಸರಿ, ಕೈ
5. ಸೂರ್ಯ, ಚಂದ್ರ, ಧುಮಕೇತು, ಮುಂತಾದವು

## II.

6. ದೀಪ
7. ಬೀಟೆ
8. ಗೀತೆ
9. ಮೀನು

## III.

10. ಡೈರಿ, ನೈದಿಲೆ, ತೈಲ

## IV.

11. ಬೆಳದಿಂಗಳು
12. ಮಳೆ.
13. ಅಲೆಗಳು
14. ಶಾಖ

# ಪಾಠ-10 ಗುಣಿತಾಕ್ಷರಗಳು

**I.**

1. ಅ
2. ಋ
3. ಓ
4. ಔ

**II.**

5. ಕ
6. ಕೀ
7. ಕೃ
8. ಕೈ
9. ಕೌ
10. ಕು

**II.**

11. ಆಕಳು, ಆಕಳು
12. ನೇಗಿಲು, ನೇಗಿಲು
13. ಕುದುರೆ, ಕುದುರೆ.
14. ಭಟ, ಭಟ.

**III**

15. ಯಂತ್ರ, ಯಂತ್ರ
16. ಜಳಕ, ಜಳಕ.

## ಪಾಠ-11 ವಿವೇಕಾನಂದರ ಜನುಮ ದಿನ

**I**

1.ದೀಪ

2. ಮಾಲೆ

3. ವಂದಿಸಿದರು

4. ಗಾಂಧಿ ಜಯಂತಿ, ಕನಕ ಜಯಂತಿ, ಬಸವ ಜಯಂತಿ, ವಾಲ್ಮೀಕಿ ಜಯಂತಿ, …..

5. ಮಾನಸ

**II**

6. ಗೋಡೆ

7. ಟೋಪಿ

8. ಕೋತಿ

9. ಜೋಗುಳ

10. ದೇಶ

**III**

11. ಕೈ

12. ಪೈ

13. ನೈ

14. ಹೈ

# ಪಾಠ-12 ಒತ್ತಕ್ಷರಗಳು

## I.

1. ಇಷ್ಟ
2. ಸತ್ಕಾರ
3. ಸ್ವಚ್ಛ
4. ಪುಸ್ತಕ
5. ಪ್ರತಿಭೆ

## II.

6. ಕ್ಕ, ಗ್ಗ, ಲ್ಲ, ದ್ದ, ನ್ನ, ಯ್ಯ,,ಪ್ಪ, ಸ್ಸ
7. ಜ್ರ, ಸ್ತ, ದೃ, ತ್ಯ,, ಸ್ಥ

## III.

8. ಅಣ್ಣ, ಸಣ್ಣ
9. ಹಬ್ಬ, ದಿಬ್ಬ
10. ಅಜ್ಜ,

## IV.

11. 'ನ' ಒತ್ತಕ್ಷರ
12. 'ಯ' ಒತ್ತಕ್ಷರ
13. 'ಇ' ಒತ್ತಕ್ಷರ
14. 'ರ'ಒತ್ತಕ್ಷರ

# ಪಾಠ-13. ಅಬ್ಬಾಸ್ ಹಣ್ಣಿನ ಅಂಗಡಿ

## I.

1. ಸಪೋಟ
2. ಪಪ್ಪಾಯ, ಸೀಬೆ, ಸಪೋಟ, ಇತ್ಯಾದಿ
3. ಹಳದಿ ಬಣ್ಣ
4. ಇಪ್ಪತ್ತು ರೂಪಾಯಿಗಳು.
5. ಐದು ರೂಪಾಯಿಗಳು

## II.

6. ಹಸಿರು
7. ಕೆಂಪು
8. ಹಳದಿ
9. ಕೇಸರಿ

## III.

10. ಕ್ಯಾರೇಟ್
11. ಆಲೂಗೆಡ್ಡೆ
12. ಮೊಟ್ಟೆ
13. ಲಿಂಬು
14. ಬೀನ್ಸ್

# ಪಾಠ-14 ಮೊಲದ ಮರಿ

I.

1. ನಾಯಿ, ಬೆಕ್ಕು, ಕುರಿ, ಮೇಕೆ ಇತ್ಯಾದಿ
2. ಬೆಕ್ಕು, ನಾಯಿ
3. ಸಿಂಹ, ಹುಲಿ, ಆನೆ, ಜಿಂಕೆ, ಜಿರಾಫೆ ಇತ್ಯಾದಿ
4. ಚಿತ್ರ ಬಿಡಿಸಿ ಬಣ್ಣ ತುಂಬುವರು

**II.**

5. ಚುಪುಕೆ ಚುಪುಕೆ ಚುಪುಕೆ ಚುಪುಕೆ
6. ಗಿಡದ ಚಿಗುರು ನಿತ್ಯ ನಿನಗೆ
7. ಎದ್ದು ಎನ್ನ ಬಳಿಗೆ ಬಂದು
8. ಮುದ್ದು ಮಾಡಿ ಪ್ರೀತಿಯಿಂದ

**III.**

9. ನೆಗೆದು ಬಾರೆ
10. ಸೊಗಸಿನೂಟ
11. ಆಡೋ ಕಂದ
12. ನಿನ್ನ ಸಲಹುವೆ

## ಪಾಠ-15 ಶಂಕ್ರಪ್ಪನ ಮನೆ

# I.

1. ಮಕ್ಕಳು ತಮ್ಮ ಕುಟುಂಬದ ಸದಸ್ಯರ ಹೆಸರನ್ನು ಬರೆಯುವರು
2. ಮದ್ಯಾಹ್ನ ಹಾಗೂ ಸಂಜೆ ಆಟದ ಸಮಯದಲ್ಲಿ ಆಟವಾಡುವೆ
3. ಕಣ್ಣಾಮುಚ್ಚಾಲೆ, ಓಟದ ಆಟಗಳು, ಕಳ್ಳ ಪೋಲೀಸ್, ಮುಂತಾದವು
4. ಕ್ರಿಕೇಟ್, ಒಳಾಂಗಣ ಆಟಗಳು, ಇತ್ಯಾದಿ
5. ಮನೆ ಒಳಗೆ ಕರೆದು ಕೂರಲು ಹೇಳಿ ಕುಡಿಯಲು ನೀರು ನೀಡುತ್ತೇವೆ
6. ಮಕ್ಕಳು ತಮ್ಮ ಕುಟುಂಬದ ಸದಸ್ಯರ ಹೆಸರನ್ನು ಬರೆಯುವರು
7. ಒಳಾಂಗಣ ಆಟಗಳು- ಹಾವು ಏಣಿ, ಚೆಸ್, ಕೇರಂ

   ಹೊರಾಂಗಣ ಆಟಗಳು- ವಾಲಿಬಾಲ್, ಖೋ-ಖೋ, ಕಬ್ಬಡಿ

# II.

8. ಸರಿ
9. ತಪ್ಪು
10. ಸರಿ
11. ಸರಿ

# III.

12 ಚಿಕ್ಕಪ್ಪ.

13. ಮಾಮ

14. ತಾತ.

# ಪಾಠ-16 ಕೈತೊಳೆಯಬೇಕು

## I.

1. ಪಲಾವು, ಚಿತ್ರಾನ್ನ, ಉಪ್ಪಿಟ್ಟು ಕೇಸರಿಬಾತು, ಚಪಾತಿ ಇತ್ಯಾದಿ
2. ಪಲಾವ್
3. ನಿತ್ಯ ಸ್ನಾನದಿನದ ಆರೋಗ್ಯ ಉತ್ತಮವಾಗಿರುತ್ತದೆ
4. ಸ್ವಚ್ಛತೆ ಇಲ್ಲದಿರುವುದು ಅನಾರೋಗ್ಯಕ್ಕೆ ಕಾರಣ

## II.

5. ವಾಸನೆ ಕಂಡು ಹಿಡಿಯಲು
6. ಬರೆಯಲು
7. ನೋಡಲು
8. ಕೇಳಲು
9. ನಡೆಯಲು
10. ತಿನ್ನಲು

## III.

11. ಭಾಗ್ಯ
12. ದೇವರು
13. ಪಾಠ ಶಾಲೆ
14. ವಿನಯವೇ

# 17. ಸಿಗಡಿ ಯಾಕೆ ಒಣಗಲಿಲ್ಲ?

## I.

1. ಮಕ್ಕಳು ತಂದೆ ತಾಯಿ ಉದ್ಯೋಗ ಬರೆಯುವರು
2. ಕಡಲಿನಲ್ಲಿ ಸೀಗಡಿಗಳು ಸಿಗುತ್ತವೆ
3. ಕುಟುಂಬದ ಸದಸ್ಯರ ಕೆಲಸಗಳನ್ನು ಮಕ್ಕಳು ಬರೆಯುವರು
4. ಮಕ್ಕಳು ತಮ್ಮ ಅನಿಸಿಕೆ ಹಾಗೂ ಸಾಕು ಪ್ರಾಣಿ ಹೆಸರು ಬರೆಯುವರು
5. ಅಪ್ಪ ಅಮ್ಮನಿಗೆ ಸಣ್ಣ ಪುಟ್ಟ ಸಹಾಯ ಮಾಡುವೆನು

II.

6. ಸಮುದ್ರ
7. ಒಂದು ಬಗೆಯ ಮೀನು
8. ಮೀನು ಹಿಡಿಯುವವನು
9. ಮಾರುವ ಜಾಗ

## III.

10. ಒಂದು ಊರಲ್ಲಿ ಕಡಲಿನ ದಡದ ಮೇಲೆ ಒಂದು ಗುಡಿಸಲು ಇತ್ತು.
11. "ಹುಲ್ಲೇ, ಹುಲ್ಲೇ, ನೀನು ಯಾಕೆ ಬಿಸಿಲಿಗೆ ಅಡ್ಡವಾದೀ?"
12. "ಇರುವೆಯೇ, ಇರುವೆಯೇ  ನೀನು ಯಾಕೆ ಮಗುವನ್‌ಉ ಕಚ್ಚಿದೆ?"
13. ಮುದುಕಿ ಸಿಗಡಿಯನ್ನು ಒಂದು ಗೋರಿ ಒಳಗೆ ತೆಗೆದುಕೊಂಡು ಹೋದಳು.